# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಆಟೋರಿಕ್ಷಾ ಕ್ಯಾಬ್‌ಗಳಿಂದ ಉಂಟಾಗುತ್ತಿರುವ ವಾಯು ಮಾಲಿನ್ಯ ನಿಯಂತ್ರಿಸಲು ದ್ವಿ-ಇಂಧನ ವ್ಯವಸ್ಥೆಗೆ ಪರಿವರ್ತನೆ ಮಾಡಿಕೊಂಡು ಎಲ್.ಪಿ.ಜಿ.ಕಿಟ್‌ಗಳನ್ನು ಅಳವಡಿಸಿಕೊಳ್ಳಲು ಕಡ್ಡಾಯಗೊಳಿಸುವಿಕೆ ದ್ವಿ-ಇಂಧನ ವ್ಯವಸ್ಥೆ ಕಲ್ಪಿಸಿಕೊಳ್ಳುವ ರಹದಾರಿ ಸಿಂಧುತ್ವ ಹೊಂದಿರುವ ಆಟೋರಿಕ್ಷಾ ಮಾಲೀಕರಿಗೆ ಆರ್ಥಿಕ ನೆರವು ನೀಡುವಿಕೆ ಆದೇಶ.

***

**ಓದಲಾಗಿದೆ:** 1) ದಿನಾಂಕ:11-6-2008ರ ತಮ್ಮ ಪತ್ರ ಸಂ:ಸಾಆ/ಪ್ರವರ್ತನ-2/ ಪಿಆರ್-523/2004-05.

2) ದಿನಾಂಕ:16-7-2008ರ ತಮ್ಮ ಪತ್ರ ಸಂ:ಸಾಆ/ಪ್ರವರ್ತನ-2/ ಪಿಆರ್-523/2004-05.

3) ದಿನಾಂಕ:6-9-2008ರ ತಮ್ಮ ಪತ್ರ ಸಂ:ಸಾಆ/ಪ್ರವರ್ತನ-2/ ಪಿಆರ್-523/2008-09.

**ಪ್ರಸ್ತಾವನೆ:**

ಮೇಲೆ ಓದಲಾದ ಸಾರಿಗೆ ಆಯುಕ್ತರ ಪತ್ರಗಳಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಬೆಂಗಳೂರು ನಗರದಲ್ಲಿ ಈಗಾಗಲೇ ಜಾರಿಯಲ್ಲಿರುವಂತೆ, ಎಲ್.ಪಿ.ಜಿ. ರಿಟ್ರೋಫಿಟ್‌ಮೆಂಟ್ ಹಾಗೂ ರೀ-ಫಿಲ್ಲಿಂಗ್ ಸೌಲಭ್ಯ ಹೊಂದಿರುವ ಕರ್ನಾಟಕದ ಇತರೆ ; ಪ್ರಮುಖ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ನೋಂದಾಯಿತವಾಗಿ ರಹದಾರಿ ಹೊಂದಿರುವ ಆಟೋರಿಕ್ಷಾಗಳಿಗೂ ಎಲ್.ಪಿ.ಜಿ. ಅಳವಡಿಕೆಯನ್ನು ಕಡ್ಡಾಯಗೊಳಿಸುವುದು ಹಾಗೂ ರೂ.2000/-ರಂತೆ ಪ್ರೋತ್ಸಾಹ ಧನ ನೀಡುವ ವ್ಯವಸ್ಥೆಯನ್ನು ವಿಸ್ತರಣೆ ಮಾಡಲು ಕೋರಿರುತ್ತಾರೆ. ಈ ಕೆಳಕಂಡಂತೆ ಒಟ್ಟು 11 ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ದಿನಾಂಕ: 31-3-2008 ರವರೆಗೆ ಒಟ್ಟಾರೆ ನೋಂದಾಯಿಸಲ್ಪಟ್ಟ ಆಟೋರಿಕ್ಷಾಗಳ ವಿವರವನ್ನು ಸಲ್ಲಿಸಲಾಗಿದೆ.

| Sl. No. | Name of the RTO | No. of Autorickshaws registered | |
|---|---|---|---|
| | | 1-4-2004 to 31-3-2006 | 1-4-2006 to 31-5-2008 |
| 1. | Mysore | 1200 | 2626 |
| 2. | Hubli-Dharwad | 540 | 1037 |
| 3. | Belgaum | 253 | 425 |
| 4. | Gulbarga | 1052 | 1993 |
| 5. | Mangalore | 1621 | 1560 |
| 6. | Udupi | 1290 | 1632 |
| 7. | Tumkur | 2436 | 2324 |
| 8. | Davanagere | 827 | 1550 |
| 9. | Puttur | 793 | 1028 |

| | | | |
|---|---|---|---|
| 10. | Shimoga | 357 | 1120 |
| 11. | Hassan | 459 | 944 |
| | TOTAL | 10828 | 16239 |
| | GRAND TOTAL | **27067** | |

ದಿನಾಂಕ: 1-4-2004 ರಿಂದ 31-5-2008ರ ಅವಧಿಯಲ್ಲಿ ಮೇಲ್ಕಂಡ ಸ್ಥಳಗಳಲ್ಲಿ ನೋಂದಾಯಿತವಾಗಿ ರಹದಾರಿ ಹೊಂದಿರುವ ಒಟ್ಟು 27,067 ಆಟೋರಿಕ್ಷಾಗಳಿದ್ದು, ಇವುಗಳಿಗೆ ಎಲ್.ಪಿ.ಜಿ ಕಿಟ್ ಅಳವಡಿಕೆಯನ್ನು ಮೊದಲ ಹಂತದಲ್ಲಿ ಅಂದರೆ, ಪ್ರಸಕ್ತ ಹಣಕಾಸು ವರ್ಷ 2008-09 ರಲ್ಲಿ ಜಾರಿಗೊಳಿಸಿ ದಿನಾಂಕ: 31-3-2009ರ ಒಳಗಾಗಿ ಎಲ್.ಪಿ.ಜಿ. ಕಿಟ್ ಅಳವಡಿಕೆಯನ್ನು ಕಡ್ಡಾಯಗೊಳಿಸಿ ಪ್ರತಿಯೊಂದು ಆಟೋರಿಕ್ಷಾಗೆ ಎಲ್.ಪಿ.ಜಿ. ಸಹಾಯಧನ ರೂ.2000/-ರಂತೆ ನೀಡಿದಲ್ಲಿ 2008-09ನೇ ಸಾಲಿನಲ್ಲಿ ಮೇಲ್ಕಂಡಂತೆ 27,067 ಆಟೋರಿಕ್ಷಾಗಳಿಗೆ ಒಟ್ಟು (27,067 x ರೂ.2000/- = ರೂ. 5,41,34,000/-ಗಳ ವೆಚ್ಚವಾಗುತ್ತದೆ. ಎಂದು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಬಗ್ಗೆ ಆಡಳಿತಾತ್ಮಕ ಮಂಜೂರಾತಿ ನೀಡಲು ಈ ಮುಂದಿನಂತೆ ಆದೇಶ ಹೊರಡಿಸಲಾಗಿದೆ.

<u>***ಸರ್ಕಾರಿ ಆದೇಶ ಸಂಖ್ಯೆ:ಸಾರಿಇ 33 ಸಾಇಪ 2007,ಬೆಂಗಳೂರು, ದಿನಾಂಕ:13.10.2008***</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಕರ್ನಾಟಕ ರಾಜ್ಯದ ಕೆಳಕಾಣಿಸಿದ ಸ್ಥಳಗಳಲ್ಲಿ ಆಟೋರಿಕ್ಷಾ ಕ್ಯಾಬ್‌ಗಳಿಂದ ಉಂಟಾಗುತ್ತಿರುವ ವಾಯು ಮಾಲಿನ್ಯ ನಿಯಂತ್ರಿಸಲು ಎಲ್ಲಾ ಆಟೋರಿಕ್ಷಾಗಳು ದ್ವಿ-ಇಂಧನ ವ್ಯವಸ್ಥೆಗೆ ಪರಿವರ್ತನೆ ಮಾಡಿಕೊಂಡು ಎಲ್.ಪಿ.ಜಿ.ಕಿಟ್‌ಗಳನ್ನು ಅಳವಡಿಸಿಕೊಳ್ಳಲು ತಕ್ಷಣದಿಂದ ಜಾರಿಗೆ ಬರುವಂತೆ ಕಡ್ಡಾಯಗೊಳಿಸಲಾಗಿದೆ.

1)ಮೈಸೂರು 2)ಹುಬ್ಬಳ್ಳಿ-ಧಾರವಾಡ
3)ಬೆಳಗಾಂ 4)ಗುಲ್ಬರ್ಗಾ
5)ಮಂಗಳೂರು 6)ಉಡುಪಿ
7)ತುಮಕೂರು 8)ದಾವಣಗೆರೆ
9)ಪುತ್ತೂರು 10)ಶಿವಮೊಗ್ಗ
11)ಹಾಸನ.

LPG ಕಿಟ್ ಅಳವಡಿಸಿಕೊಂಡು ದ್ವಿ-ಇಂಧನ ವ್ಯವಸ್ಥೆ ಕಲ್ಪಿಸಿ ಕೊಂಡಿರುವ/ಪರಿವರ್ತನೆ ಹೊಂದಿ ರಹದಾರಿ ಸಿಂಧುತ್ವ ಹೊಂದಿರುವ ಆಟೋರಿಕ್ಷಾ

ಮಾಲೀಕರಿಗೆ ತಲಾ 2000/- ರೂಗಳಂತೆ ಪ್ರೋತ್ಸಾಹ ಧನ ನೀಡುವ ಕುರಿತು ಅರ್ಜಿಗಳನ್ನು ಇತ್ಯರ್ಥಪಡಿಸಿ ಫಲಾನುಭವಿಗಳಿಗೆ ಸಹಾಯಧನ ನೀಡಲು ಇದರೊಂದಿಗಿರುವ ಅನುಬಂಧದ ನಿಬಂಧನೆಗೊಳಪಟ್ಟು, ಸರ್ಕಾರದ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ನಗರ ಪಾಲಿಕೆಗಳು ಹಾಗೂ ಇತರೆ ಸ್ಥಳಗಳಲ್ಲಿ ಪರಿಹಾರ ದನ ವಿತರಿಸುವ ಸಮಿತಿಯನ್ನು ಈ ಕೆಳಕಂಡಂತೆ ರಚಿಸತಕ್ಕದ್ದು.

| | | |
|---|---|---|
| ಆಯಾ ವಿಭಾಗದ ಉಪ ಸಾರಿಗೆ ಆಯುಕ್ತರು | - | ಅಧ್ಯಕ್ಷರು |
| ಪ್ರಾದೇಶಿಕ ಸಾರಿಗೆ ಅಧಿಕಾರಿಗಳು | - | ಸದಸ್ಯರು |
| ಆಯಾವಿಭಾಗದ ಮತ್ತೊಬ್ಬ ಪ್ರಾದೇಶಿಕಸಾರಿಗೆ ಅಧಿಕಾರಿ | - | ಸದಸ್ಯರು |
| ಕಛೇರಿ ಅಧೀಕ್ಷಕರು | - | ಸದಸ್ಯಕಾರ್ಯದರ್ಶಿ |

ಈ ಬಗ್ಗೆ ಅನುದಾನವನ್ನು ಬಿಡುಗಡೆ ಮಾಡುವಾಗ, ಸರ್ಕಾರದ ಆದೇಶ ಸಂಖ್ಯೆ FD 1 TFP 2008 ದಿನಾಂಕ: 16-5-2008 ರಲ್ಲಿನ ಷರತ್ತುಗಳನ್ನು ಪಾಲಿಸತಕ್ಕದ್ದು.

ಈ ಆದೇಶವನ್ನು ಒಳಾಡಳಿತ ಮತ್ತು ಸಾರಿಗೆ ಇಲಾಖೆಯ ಅಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂ.ಒಸಾಇ 49780 ಅಂಅಸ 2008ರಲ್ಲಿ ನೀಡಿರುವ ಸಹಮತಿ ಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಂ.ಆರ್.ಚಂದ್ರಶೇಖರಾರಾಧ್ಯ) 31/10/08
ಪೀಠಾಧಿಕಾರಿ
ಸಾರಿಗೆ ಇಲಾಖೆ

*ಇವರಿಗೆ:*

1.ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸಾರಿಗೆ ಆಯುಕ್ತರು, ಬೆಂಗಳೂರು.
3.ಎಲ್ಲಾ ಜಂಟಿ ಸಾರಿಗೆ ಆಯುಕ್ತರು ಮತ್ತು ಉಪಸಾರಿಗೆ ಆಯುಕ್ತರು, ಸಾರಿಗೆ ಇಲಾಖೆ.
4.ಎಲ್ಲಾ ಪ್ರಾದೇಶಿಕ ಸಾರಿಗೆ ಆಧಿಕಾರಿಗಳು(ಸಾರಿಗೆ ಆಯುಕ್ತರ ಮುಖಾಂತರ)
5.ಆಂತರಿಕ ಆರ್ಥಿಕ ಸಲಹೆಗಾರರು,ಒಳಾಡಳಿತ ಮತ್ತು ಸಾರಿಗೆ ಇಲಾಖೆ,ಬೆಂಗಳೂರು.
6.ಮಾನ್ಯ ಸಾರಿಗೆ ಸಚಿವರ ಆಪ್ತ ಕಾರ್ಯದರ್ಶಿ,ವಿಧಾನ ಸೌಧ ಬೆಂಗಳೂರು.
7.ಸರ್ಕಾರದ ಪ್ರಧಾನ ಕಾರ್ಯದರ್ಶಿ, ರವರ ಆಪ್ತ ಕಾರ್ಯದರ್ಶಿ, ಸಾರಿಗೆ ಇಲಾಖೆ.
8.ಸರ್ಕಾರದ ಉಪ ಕಾರ್ಯದರ್ಶಿ, ಸಾರಿಗೆ ಇಲಾಖೆ.
9.ಸರ್ಕಾರದ ಅಧೀನ ಕಾರ್ಯದರ್ಶಿ, ಸಾರಿಗೆ ಇಲಾಖೆ.
10.ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಸರ್ಕಾರಿ ಆದೇಶ ಸಂಖ್ಯೆ ಸಾರಿಇ 33 ಸಾಇಪ 2007

ದಿನಾಂಕ: 13-10-2008 ಕ್ಕೆ ಅನುಬಂಧ

## ನಿಬಂಧನೆಗಳು

1) ದಿನಾಂಕ: 1-4-1991 ರಂದು ಅಥವಾ ನಂತರ ಮೈಸೂರು, ಹುಬ್ಬಳ್ಳಿ-ಧಾರವಾಡ, ಬೆಳಗಾಂ, ಗುಲ್ಬರ್ಗಾ, ಮಂಗಳೂರು, ಉಡುಪಿ, ತುಮಕೂರು, ದಾವಣಗೆರೆ ಪುತ್ತೂರು, ಶಿವಮೊಗ್ಗ, ಹಾಸನ, ಪ್ರದೇಶದಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಪರವಾನಿಗೆ ಹೊಂದಿ ಸಂಚರಿಸುತ್ತಿರುವ ಆಟೋರಿಕ್ಷಾ ಕ್ಯಾಬ್‌ಗಳು ಅರ್ಹ ಪ್ರಾಧಿಕಾರದಿಂದ ಅರ್ಥಿಕ ನೆರವು ಪಡೆಯಲು ಅರ್ಹರಾಗಿರುತ್ತಾರೆ.

2) ಕೇಂದ್ರ ಮೋಟಾರು ವಾಹನಗಳ ನಿಯಮಗಳಡಿಯಲ್ಲಿ ಸೂಚಿಸಿರುವಂತೆ ಎಲ್.ಪಿ.ಜಿ. ಕಿಟ್‌ಗಳನ್ನು ಸಾರಿಗೆ ಆಯುಕ್ತರಿಂದ ಮಾನ್ಯತೆ ಪಡೆದ ಪರೀಕ್ಷಾ ಕೇಂದ್ರಗಳು ಮಾತ್ರ ದೃಢೀಕರಿಸತಕ್ಕದ್ದು.

3) ಸಾರಿಗೆ ಆಯುಕ್ತರಿಂದ ಮಾನ್ಯತೆ ಪಡೆದ ರೆಟ್ರೋಫಿಟ್‌ಮೆಂಟ್ ಕೇಂದ್ರಗಳಿಂದ ಮಾನ್ಯತೆ ಪಡೆದ ರೆಟ್ರೋಫಿಟ್‌ಮೆಂಟ್ ಕಿಟ್‌ಗಳನ್ನು ಮಾತ್ರ ಅಳವಡಿಸಿಕೊಳ್ಳತಕ್ಕದ್ದು.

4) ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಸಿಲಿಂಟರ್ ಹಾಗೂ ಕಿಟ್‌ಗಳನ್ನು ಪರಿಶೀಲಿಸಿದ ನಂತರ ಆರ್.ಸಿ.ಪುಸ್ತಕದಲ್ಲಿ ದಾಖಲಿಸಿ ನಂತರ ದೃಢೀಕರಣ ನೀಡತಕ್ಕದ್ದು.

5) ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಪ್ರತಿವಾರ ರೆಟ್ರೋಫಿಟ್‌ಮೆಂಟ್‌ಗೆ ಅಳವಡಿಸಿದ ವಾಹನದ ಸಂಖ್ಯೆ ಮತ್ತು ಮಾದರಿ, ಕಿಟ್ ಸಂಖ್ಯೆ ಮತ್ತು ಮಾದರಿ ಹಾಗೂ ರಟ್ರೋಫಿಟ್ ಸೆಂಟರ್ ಹೆಸರು, ವಿಳಾಸ ಮತ್ತು ದಿನಾಂಕ ಒಳಗೊಂಡಂತೆ ಒಂದು ವರದಿಯನ್ನು ಸಾರಿಗೆ ಆಯುಕ್ತರಿಗೆ ಕಳುಹಿಸತಕ್ಕದ್ದು.

6) ವಾಹನ ಮಾಲೀಕರು ಎಲ್.ಪಿ.ಜಿ.ಕಿಟ್ ಅಳವಡಿಸಲು ರಾಷ್ಟ್ರೀಕೃತ ಬ್ಯಾಂಕ್:ಸರ್ಕಾರದಿಂದ ಮಾನ್ಯತೆ ಪಡೆದ ಸಹಕಾರ ಬ್ಯಾಂಕ್‌ಗಳಿಂದ ಸಾಲ ಪಡೆದಿದ್ದಲ್ಲಿ ಅಂತಹವರ ಎಲ್.ಪಿ.ಜಿ. ಕಿಟ್ ಸಾಲದ ಖಾತೆಗೆ ಆರ್ಥಿಕ ನೆರವಿನ ಹಣ ರೂ. 2000 ನ್ನು ಚೆಕ್ ಮೂಲಕ ಪಾವತಿ ಮಾಡತಕ್ಕದ್ದು.

7) ಒಂದು ವೇಳೆ ವಾಹನ ಮಾಲೀಕರು ಯಾವುದೇ ರಾಷ್ಟ್ರೀಕೃತ ಬ್ಯಾಂಕ್: ಸರ್ಕಾರದಿಂದ ಮಾನ್ಯತೆ ಪಡೆದ ಸಹಕಾರ ಬ್ಯಾಂಕ್‌ಗಳಿಂದ ಸಾಲ ಪಡೆಯದೇ ಇದ್ದು ಅಂತಹವರು ಎಲ್.ಪಿ.ಜಿ ಕಿಟ್‌ನ್ನು ಅವರ ವಾಹನಕ್ಕೆ ಅಳವಡಿಸಿಕೊಂಡಲ್ಲಿ ಅಂತಹ ವಾಹನ ಮಾಲೀಕರಿಗೆ ನೀಡಬೇಕಾದ ಆರ್ಥಿಕ ನೆರವು ರೂ. 2000 ನ್ನು ರೆಟ್ರೋಫಿಟ್‌ಮೆಂಟ್ ಕೇಂದ್ರಗಳಿಗೆ ಚೆಕ್ ಮೂಲಕ ನೀಡತಕ್ಕದ್ದು.

8) ಪ್ರತಿ ವರದಿಯ ಸತ್ಯಾಸತ್ಯತೆ ಬಗ್ಗೆ ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗಿದೆ.

9) ಸಾರಿಗೆ ಆಯುಕ್ತರು ರೆಟ್ರೋಫಿಟ್‌ಮೆಂಟ್ ಕೇಂದ್ರಗಳ ವರದಿ ಪರಿಶೀಲಿಸಿ, ದೃಢೀಕರಿಸಿದ ನಂತರವೇ ಸಹಾಯ ದನ ಪಾವತಿಸಬೇಕಾಗಿರುತ್ತದೆ.

10) ರೆಟ್ರೋಫಿಟ್‌ಮೆಂಟ್ ಕೇಂದ್ರಗಳನ್ನು ಸಹಾಯ ದನ ಪಡೆದ ಬಗ್ಗೆ ಸಂಬಂಧಪಟ್ಟ, ವಾಹನಗಳ ವಿವರಗಳನ್ನೊಳಗೊಂಡಂತೆ ಸರಿಯಾದ ಲೆಕ್ಕಪತ್ರಗಳನ್ನು ಇಟ್ಟಿರತಕ್ಕದ್ದು ಹಾಗೂ ಇದನ್ನು ಸಾರಿಗೆ ಆಯುಕ್ತರು ಯಾವ ಹಂತದಲ್ಲಾದರೂ ನೋಡಲು ಇಚ್ಛಿಸಿದಲ್ಲಿ ತಕ್ಷಣವೇ ಒಪ್ಪಿಸತಕ್ಕದ್ದು.

11) ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಅಧಿಕಾರಿಯು ಅನುಮತಿ ಇಲ್ಲದೆ ಎಲ್.ಪಿ.ಜಿ. ಕಿಟ್‌ಗಳನ್ನು ತೆಗೆದು ಹಾಕುವುದಾಗಲಿ: ಬದಲಾಯಿಸುವುದಾಗಲಿ ಮಾಡಿದಲ್ಲಿ ಅಂತಹವರ ಮೇಲೆ ಕಾನೂನಿನ ಪ್ರಕಾರ ಕ್ರಮ ವಹಿಸಿ ಅವರ ರಹದಾರಿ ಪತ್ರವನ್ನು ನಿಷ್ಕ್ರಿಯಗೊಳಿಸತಕ್ಕದ್ದು.

12) ಸಾರಿಗೆ ಆಯುಕ್ತರು ತತ್ಸಂಬಂಧ ಮಾಹಿತಿಯನ್ನು ಎಂ.ಎಂ.ಆರ್.ಸಭೆಯಲ್ಲಿ ಸಲ್ಲಿಸತಕ್ಕದ್ದು ಹಾಗೂ ಹಣ ಉಪಯುಕ್ತತೆಯ ದೃಢೀಕರಣ ಪತ್ರವನ್ನು ತ್ರೈಮಾಸಿಕವಾಗಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(ಎಂ.ಆರ್.ಚಂದ್ರಶೇಖರಾರಾಧ್ಯ) 31/10/08
ಪೀಠಾಧಿಕಾರಿ
ಸಾರಿಗೆ ಇಲಾಖೆ